# ಭಾಗ 1:

## ಮರ್ತ್ಯ ಮಾನವ

ಭವಿಷ್ಯದಲ್ಲಿ ಏನು ಸಂಭವಿಸುತ್ತದೆ ಎಂಬುದನ್ನು ತಿಳಿಯಲು ನಮ್ಮಲ್ಲಿ ಅನೇಕರು ಬಯಸುತ್ತೇವೆ. ಭವಿಷ್ಯವನ್ನು ಮುಂತಿಳಿಸುವೆವು ಎಂದು ಹೇಳಿಕೊಳ್ಳುವವರು ಕೆಲವು ಸಮೂಹಗಳಲ್ಲಿ ಪ್ರಸಿದ್ಧರಾಗಿದ್ದಾರೆ. ಸಂದೇಹ ತುಂಬಿದ ಪುಸ್ತಕವನ್ನು ಓದುವಾಗ ನಾವು ಕುತೂಹಲವುಳ್ಳವರಾದರೆ, ನಾವು ಹೆಚ್ಚಾದ ಸಲ ಏನು ಸಂಭವಿಸುತ್ತದೆ ಎಂಬುದನ್ನು ಕಂಡುಕೊಳ್ಳಲಿಕ್ಕೆ ಅಂತ್ಯಕ್ಕೆ ತಿರುಗುತ್ತೇವೆ. ಮರಣಾನಂತರ ಏನು ಸಂಭವಿಸುವುದು ಎಂಬುದನ್ನು ತಿಳಿಯಲು ನಮ್ಮಲ್ಲಿ ಅನೇಕರು ಬಯಸುತ್ತೇವೆ. ನಾವು ಕೊನೆಯ ಪುಟಗಳ ಕಡೆಗೆ ತಿರುಗಿ, ನಾವು ಈ ಜೀವಿತದಿಂದ ಹೊರಗೆ ಹೋಗುವಾಗ ಏನು ಸಂಭವಿಸುತ್ತದೆ ಎಂಬುದನ್ನು ಓದುವುದು ಶುಭವಾರ್ತೆಯಾಗಿರುತ್ತದೆ. ನಾವು ತಿಳಿಯ ಬೇಕೆಂದು ಬಯಸುವದೆಲ್ಲವನ್ನೂ ದೇವರು ಪ್ರಕಟಿಸಿರುವದಿಲ್ಲ, ಆದರೆ ಮರಣದ ದ್ವಾರದ ಮುಖಾಂತರ ನಾವು ಹೆಜ್ಜೆಯಿಡುವಾಗ ನಮ್ಮ ಜೀವಿತಗಳ ಅತಿದೊಡ್ಡ ನಾಟಕದೊಳಗೆ ನಾವು ಒಯ್ಯಲ್ಪಡುತ್ತೇವೆಂಬುದನ್ನು ನಮಗೆ ಹೇಳಲು ಈ ಜೀವಿತವನ್ನು ಹಿಂಬಾಲಿಸುವ ಸಂಗತಿಗಳ ಬಗ್ಗೆ ಸಾಕಷ್ಟನ್ನು ಆತನು ಪ್ರಕಟಿಸಿದ್ದಾನೆ.

"ಜೀವಿತರು ತಾವು ಸಾಯುತ್ತೇವೆ ಎಂದು ತಿಳಿದಿರುವಾಗ" (ಪ್ರಸಂಗಿ 9:5), ನಾವು ಎಷ್ಟು ಕಾಲ ಬದಿಕಿ ಇರುತ್ತೇವೆ ಎಂಬುದನ್ನು ತಿಳಿದಿರುವದಿಲ್ಲ. ಅನಿಶ್ಚಿತವಾಗಿರುವದೆಂದು ನಾವು ತಿಳಿದಿರುವ, ಜೀವಿತಕ್ಕಾಗಿ ಸಿದ್ಧಮಾಡುವಲ್ಲಿ ನಮ್ಮ ಹೆಚ್ಚಾದ ಸಮಯವನ್ನು ಕಳೆಯುತ್ತೇವೆ, ಹಾಗೂ ನಿಶ್ಚಿತವಾಗಿರುವದೆಂದು ನಾವು ತಿಳಿದಿರುವ ಮರಣಕ್ಕಾಗಿ ಸಿದ್ಧತೆ ಮಾಡುವಲ್ಲಿ ಅಲ್ಪ ಸಮಯವನ್ನು ಕೆಳೆಯುವದಿಲ್ಲ.

ಮರಣದಲ್ಲಿ ನಾವು ಯಾಕೆ ಆಸಕ್ತರಾಗಿರಬೇಕು ಇಲ್ಲವೇ ನಾವು ಸಾಯುವಾಗ ಏನು ಸಂಭವಿಸುತ್ತದೆ ಎಂಬುದರ ಬಗ್ಗೆ ಚಿಂತಿಸಬೇಕು? ಮರಣದಂಥ ಅನುಭವವು ಏನಾಗಿದೆ? ಅದು ಹೇಗೆ ನಮ್ಮ ಮೇಲೆ ಪರಿಣಾಮ ಮಾಡುವುದು? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಅರ್ಥಮಾಡಿಕೊಳ್ಳುವುದು ಮರಣದ ಬಗೆಗಿನ ನಮ್ಮ ದೃಷ್ಟಿಕೋನಗಳ ಮೇಲೆ ಪ್ರಭಾವ ಬೀರಬಹುದು, ಮರಣದ ಕಡೆಗೆ ನಮ್ಮ ಮನೋಭಾವನೆಗಳನ್ನು ರೂಪಿಸಬಹುದು (ನಮ್ಮ ಸ್ವಂತ ಮತ್ತು ಇತರರ), ನಮಗೆ ನಿರೀಕ್ಷೆಯನ್ನು ಕೊಡುತ್ತದೆ, ನಾವು ಜೀವಿಸುವ ಮಾರ್ಗದ ಮೇಲೆ ಪರಿಣಾಮ ಮಾಡುವುದು ಮತ್ತು ಮರಣಕ್ಕಾಗಿ ಸಿದ್ಧಮಾಡಲಿಕ್ಕೆ ನಮ್ಮನ್ನು ಪ್ರೇರೇಪಿಸುವುದು.

ಈ ವಿಭಾಗಲ್ಲಿ ನಮ್ಮ ಮರ್ತ್ಯ ಸ್ಥಿತಿಯನ್ನೂ, ರಚನೆಯನ್ನೂ, ಮರಣದಲ್ಲಿ ಏನಾಗುವವೆಂಬುದನ್ನೂ, ಮರಣಾನಂತರ ಜೀವದ ಭರವಸೆಯನ್ನೂ, ಅಂದರೆ ಮರಣ ಮತ್ತು ಪುನರುತ್ಥಾನದ ಮಧ್ಯದಲ್ಲಿಯ ಮಾನವ ಅಸ್ತಿತ್ವದ ಬಗ್ಗೆ ಯೋಚಿಸುತ್ತೇವೆ.

© 2009 Truth for Today